# ಮಾಗಡಿ ರಂಗನಾಥನಿಗೆ ಚಿನ್ನಾಭರಣ ಅರ್ಪಣೆ

**ಮಾಗಡಿ :** ಪಟ್ಟಣದ ಐತಿಹಾಸಿಕ ತಿರುಮಲೆ ಶ್ರೀ ರಂಗನಾಥ ಸ್ವಾಮಿ ದೇವರಿಗೆ ಸುಮಾರು ಒಂದು ಕೋಟಿ ಮೂವತ್ತು ಲಕ್ಷ ಮೌಲ್ಯದ ಚಿನ್ನಾಭರಣವನ್ನು ದೇವಸ್ಥಾನದ ಅರ್ಚಕರ ಕುಟುಂಬದಿಂದ ಸಮರ್ಪಣೆ ಮಾಡಲಾಗುತ್ತಿದೆ.

ಪ್ರಧಾನ ಆಗಮಿಕರು ಹಾಗೂ ಪ್ರಧಾನ ಅರ್ಚಕರಾಗಿದ್ದ ಕಲ್ಯಾಣಿ ವೆಂಕಟರಂಗಾಚಾರ್ ಅಯ್ಯಂಗಾರ್ ಕುಟುಂಬದ ವತಿಯಿಂದ ದೇವಸ್ಥಾನಕ್ಕೆ ಮೂಲ ವಿಗ್ರಹಕ್ಕೆ ಅಭಯ ಗದಾ ಹಸ್ತ ಒಳಗೊಂಡ ಒಂದು ಕೋಟಿ ಇಪ್ಪತ್ತು ಲಕ್ಷ ವೆಚ್ಚದಲ್ಲಿ ಅತಿ ಶೀಘ್ರದಲ್ಲೇ ಸಮರ್ಪಣೆ ಮಾಡಲಾಗುತ್ತದೆ ಎಂದು ಅರ್ಚಕರ ಮೊಮ್ಮಗ ಸಂತೋಷ್ ಅಯ್ಯಂಗಾರ್ ತಿಳಿಸಿದ್ದಾರೆ.

ಶ್ರೀರಂಗನಾಥ ಸ್ವಾಮಿ ಕೃಪೆಯಿಂದ ಕುಟುಂಬಕ್ಕೆ ಸಾಕಷ್ಟು ಅನುಕೂಲವಾಗಿದ್ದು ಭಗವಂತನಿಗೆ ಶಾಶ್ವತವಾಗಿ ಉಪಯುಕ್ತ ಪದಾರ್ಥ ಸಮರ್ಪಿಸಬೇಕೆಂದು ಕುಟುಂಬಸ್ಥರು ನಿರ್ಧರಿಸಿ, ದೇವರಿಗೆ ಚಿನ್ನದ ಅಭಯ ಹಸ್ತ ಮತ್ತು ಗದಾಹಸ್ತವನ್ನು ನೀಡಲಾಗುತ್ತಿದ್ದು ಇದನ್ನು ಭಾರತೀಯ ಸೇನೆ, ರೈತರು ಹಾಗೂ ಲೋಕಕಲ್ಯಾಣಾರ್ಥವಾಗಿ ಸಮರ್ಪಣೆ ಮಾಡಲಾಗುತ್ತಿದ್ದು ಅತಿ ಶೀಘ್ರದಲ್ಲೇ ಸಮರ್ಪಣಾ ಕಾರ್ಯಕ್ರಮ ನಡೆಯಲಿದ್ದು ವಿವಿಧ ಶ್ರೀಗಳು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಸಮರ್ಪಣಾ ದಿನವನ್ನು ಶೀಘ್ರ ಪ್ರಕಟಿಸಲಾಗುವುದು ಎಂದರು.

## ಸ್ವಸಹಾಯ ಸಂಘಗಳನ್ನು ಸದೃಢಗೊಳಿಸುವ ಕಾರ್ಯವಾಗಲಿ : ಶಾಸಕ

# ಬ್ಯಾಂಕ್ ಸಾಲ ಸೌಲಭ್ಯ ಹೆಚ್ಚಳಕ್ಕೆ ಸೂಚನೆ

**ಸಂ.ಕ. ಸಮಾಚಾರ, ರಾಮನಗರ**

ಗ್ರಾಮೀಣ ಜನರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮ ಪಡಿಸಲು ಬಿಡಿಸಿಸಿ ಬ್ಯಾಂಕ್ ಸಾಲ ಸೌಲಭ್ಯದ ಪ್ರಮಾಣವನ್ನು ಹೆಚ್ಚಿಸಬೇಕು. 10 ಕೋಟಿ ರೂ.ವರೆಗೆ ಸಾಲ ನೀಡಿ ಸಹಕಾರ ಸಂಘದ ಅಭಿವೃದ್ಧಿಗೆ ನೆರವಾಗಬೇಕು ಎಂದು ಶಾಸಕ ಎಚ್.ಎ.ಇಕ್ಬಾಲ್ ಹುಸೇನ್ ಹೇಳಿದರು.

ತಾಲೂಕಿನ ಕಸಬಾ ಹೋಬಳಿ ಪಾಲಬೋವಿದೊಡ್ಡಿ ಗ್ರಾಮದಲ್ಲಿ ನಿರ್ಮಾಣವಾಗಿರುವ ಹಳ್ಳಿಮಾಳ ವಿವಿದೋದ್ದೇಶ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಕಟ್ಟಡವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಹಕಾರ ಸಂಘಗಳು ಹಾಗೂ ಸ್ತ್ರೀ ಶಕ್ತಿ ಮತ್ತು ಸ್ವಸಹಾಯ ಸಂಘಗಳನ್ನು ಸದೃಢಗೊಳಿಸುವ ನಿಟ್ಟಿನಲ್ಲಿ ಬಿಡಿಸಿಸಿ ಬ್ಯಾಂಕ್ ಪಾತ್ರ ಮಹತ್ವದ್ದಾಗಿದೆ. ಬೆಳೆ ಸಾಲದ ಜೊತೆಗೆ ಹಸು, ಕುರಿ, ಮೇಕೆ, ಕೋಳಿ ಸಾಕಾಣಿಕೆಗೆ ನೆರವು ನೀಡುತ್ತಿರುವುದು ಉತ್ತಮ ಬೆಳವಣಿಗೆ ಎಂದು ಪ್ರಶಂಸಿಸಿದರು.

ಬಿಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ವೈ.ಎಚ್. ಮಂಜು ಮಾತನಾಡಿ, ಸ್ತ್ರೀ ಶಕ್ತಿ ಸಂಘಗಳು ಗ್ರಾಮೀಣ ಕೃಷಿ ಸಹಕಾರ ಸಂಘಗಳಿಂದ ಸಾಲ ಪಡೆಯಲು ಅವಕಾಶವಿದೆ. ಅನ್ಯ ಸಂಸ್ಥೆಗಳಿಂದ ಪಡೆದ ಸಾಲದ ಬಡ್ಡಿ ದರದ ಬಗ್ಗೆ ಸ್ತ್ರೀಶಕ್ತಿ ಸಂಘಗಳು ಗಮನ ಹರಿಸಬೇಕು. ಬಿಡಿಸಿಸಿ ಬ್ಯಾಂಕ್ ಸರಳೀಕರಣದಲ್ಲಿ ಕಡಿಮೆ ಬಡ್ಡಿದರದಲ್ಲಿ ಮನೆ ಬಾಗಿಲನಲ್ಲೇ ಸಾಲ ನೀಡುತ್ತಿದೆ. ಈ ವಿಚಾರದಲ್ಲಿ ಇನ್ನು 2 –3 ತಿಂಗಳಲ್ಲಿ ಸ್ತ್ರೀಶಕ್ತಿ ಸಂಘಗಳ ಬೃಹತ್ ಸಮಾವೇಶವನ್ನು ಆಯೋಜಿಸಲು ನಿರ್ಧರಿಸಲಾಗಿದೆ ಎಂದರು.

ಕೆಸಿಸಿ ಬೆಳೆಸಾಲ ಯೋಜನೆಡಿಯಲ್ಲಿ ಬೆಳೆಸಾಲ ಕೊಡಲು ಕಳೆದ 6 ತಿಂಗಳುಗಳಿಂದ ವಿಳಂಭವಾಗುತಿದೆ. ಇದಕ್ಕೆ ಕೇಂದ್ರ ಸರ್ಕಾರದ ವಿಳಂಬ ನೀತಿ ಕಾರಣ. ಕೆಸಿಸಿ ಬೆಳೆಸಾಲ ಯೋಜನೆಯಲ್ಲಿ ಬಿಡಿಸಿಸಿ ಬ್ಯಾಂಕ್ ವತಿಯಿಂದ 108 ಕೋಟಿ ರೂ ಸಾಲ ಕೊಡುವ ಉದ್ದೇಶವಿದೆ. ಕೇಂದ್ರ ಸರ್ಕಾರ ವಿಳಂಬ ಮಾಡಿದರೆ ಪರ್ಯಾಯ ವ್ಯವಸ್ಥೆ ಮಾಡಿಕೊಂಡು ಕೆಸಿಸಿ ಬೆಳೆಸಾಲ ವಿತರಣೆ ಮಾಡುವ ಉದ್ದೇಶ ಬಿಡಿಸಿಸಿ ಹೊಂದಿದೆ ಎಂದು ತಿಳಿಸಿದರು.

ಬಿಡಿಸಿಸಿ ಬ್ಯಾಂಕ್ ಮಾಜಿ ನಿರ್ದೇಶಕ ಪಿ.ಅಶ್ವತ್ಥ್ ಮಾತನಾಡಿದರು. ಇದೇ ವೇಳೆ ಸಂಘದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೆರವೇರಿಸಲಾಯಿತು.

ಮಾಜಿ ಶಾಸಕ ಕೆ.ರಾಜು, ವೃತ್ತಿಪರ ನಿರ್ದೇಶಕ ಪಾರ್ಥಸಾರಥಿ, ಸಂಘದ ಅಧ್ಯಕ್ಷ ಸುರೇಶ್,ಉಪಾಧ್ಯಕ್ಷೆ ಸಿ.ಆರ್.ಚೈತ್ರ, ಸಿಇಓ ಪಿ.ಪ್ರಕಾಶ್, ನಿರ್ದೇಶಕರಾದ ಚಿಕ್ಕಮಾದಯ್ಯ, ಕೃಷ್ಣೇಗೌಡ, ಎಂ.ನಂಜಯ್ಯ, ಅನುಸೂಯಮ್ಮ, ಪುಟ್ಟರಾಮು, ನಾಗಯ್ಯ,

ಸಂದೀಪ್‌ಗೌಡ, ನವೀನ್‌ಕುಮಾರ್, ಮಾಜಿ ಅಧ್ಯಕ್ಷ ರಾಮ ಮೋಹನ್, ಮುಖಂಡರಾದ ಮಂಚೇಗೌಡ, ರಾಜು, ಪ್ರಕಾಶ್, ಅಶೋಕ್, ಶಿವಣ್ಣ ಸಿಬ್ಬಂದಿಗಳಾದ ರೂಪಿಣಿ, ರವಿಕುಮಾರ್ ಉಪಸ್ಥಿತರಿದ್ದರು.

# ಪ್ರತ್ಯೇಕ ಸಿವಿಲ್ ನ್ಯಾಯಾಲಯ ಸ್ಥಾಪನೆಗೆ ಒತ್ತಾಯ

**ಸಂ.ಕ. ಸಮಾಚಾರ, ಕನಕಪುರ**

ತಹಸೀಲ್ದಾರ್, ಉಪವಿಭಾಗ ಅಧಿಕಾರಿ ಮತ್ತು ಜಿಲ್ಲಾಧಿಕಾರಿಗಳ ನ್ಯಾಯಾಲಯಗಳಿಂದ ಸಾರ್ವಜನಿಕರಿಗೆ ನ್ಯಾಯ ದೊರಕದೆ ನಿತ್ಯ ತೊಂದರೆಯಾಗುತ್ತಿರುವುದರಿಂದ ನ್ಯಾಯಾಲಯಗಳಿಂದ ಆರ್.ಆರ್.ಟಿ ವಿಭಾಗದಲ್ಲಿ ನ್ಯಾಯ ಸಿಗುತ್ತಿಲ್ಲ, ಇವುಗಳನ್ನು ರದ್ದುಪಡಿಸಿ ಪ್ರತ್ಯೇಕ ಸಿವಿಲ್ ರೆವಿನ್ಯೂ ನ್ಯಾಯಾಲಯವನ್ನು ಸ್ಥಾಪಿಸಬೇಕೆಂದು ವಿವಿಧ ಪ್ರಗತಿಪರ ಸಂಘಟನೆಗಳವರು ಮುಖ್ಯಮಂತ್ರಿಗಳನ್ನು ಒತ್ತಾಯಿಸಿದ್ದಾರೆ.

ನಗರದ ಕೋಟೆ ಗಣಪತಿ ದೇವಾಲಯದಲ್ಲಿ ಜಯಕರ್ನಾಟಕ ಜನಪರ ವೇದಿಕೆ ರಾಜ್ಯ ಸಲಹೆಗಾರ ಕುಮಾರಸ್ವಾಮಿ ಅವರು ಶುಕ್ರವಾರ ಮಾತನಾಡಿ, ರಾಜ್ಯದ ಎಲ್ಲಾ ತಾಲೂಕಿನ ಜನತೆ ತಮ್ಮ ಸಿವಿಲ್ ಹಾಗೂ ರೆವಿನ್ಯೂ ಪ್ರಕರಣಗಳಿಗೆ ನ್ಯಾಯ ದೊರಕಿಸಿಕೊಳ್ಳಲು ತಹಸಿಲ್ದಾರ್ ಉಪವಿಭಾಗಾಧಿಕಾರಿ ಹಾಗೂ ಜಿಲ್ಲಾಧಿಕಾರಿಗಳ ನ್ಯಾಯಾಲಯಗಳಿಗೆ ವರ್ಷಗಳು ಕಳೆದರೂ ನ್ಯಾಯ ಸಿಗದೆ ಅಲೆದಾಡುತ್ತಲೇ ಇದ್ದಾರೆ. ಪ್ರತ್ಯೇಕ ಸಿವಿಲ್ ರೆವಿನ್ಯೂ ನ್ಯಾಯಾಲಯ ಸ್ಥಾಪಿಸಿದ್ದಲ್ಲಿ ಶೀಘ್ರವಾಗಿ ಗ್ರಾಮೀಣ ರೈತರಿಗೆ ನ್ಯಾಯ ದೊರಕಲು ಅನುಕೂಲವಾಗುತ್ತದೆ.

ರಾಜ್ಯದ ಕಂದಾಯ ಸಚಿವ ಕೃಷ್ಣಭೈರೇಗೌಡರು ಮುಖ್ಯಮಂತ್ರಿ ಸಿದ್ದರಾಮಯ್ಯನವರ ಗಮನಕ್ಕೆ ತಂದು ಪ್ರತ್ಯೇಕ ನ್ಯಾಯಾಲಯದ ಸ್ಥಾಪನೆಗೆ ಪ್ರಯತ್ನಿಸಬೇಕೆಂದು ಒತ್ತಾಯಿಸಿದ್ದಾರೆ.

ಈ ಸಂದರ್ಭದಲ್ಲಿ ರೈತ ಸಂಘದ ಮುಖಂಡರಾದ ನಲ್ಲಹಳ್ಳಿ ಶ್ರೀನಿವಾಸ್, ಮುಳ್ಳಹಳ್ಳಿ ಮಂಜುನಾಥ್, ಕೆಬ್ಬಳ್ಳಿ ಶಿವರಾಜು, ಜಯಕರ್ನಾಟಕ ಸಂಘಟನೆಯ ವೀರೇಶ್, ಹಿಂದೂಪರ ಸಂಘಟನೆಯ ಎ.ಪಿ.ಕೃಷ್ಣಪ್ಪ, ಕೆ.ಆರ್.ಸುರೇಶ್, ಮಿಲ್ಟ್ರಿ ರಾಮಣ್ಣ, ದೇವರಾಜು, ಚಂದ್ರಶೇಖರಯ್ಯ, ಜೀವನ್ ಟ್ರಸ್ಟ್ ಅಧ್ಯಕ್ಷ ಪ್ರಶಾಂತ್ ಹೊಸದುರ್ಗ, ನೇಗಿಲಯೋಗಿ ಟ್ರಸ್ಟ್‌ನ ಗಬ್ಬಾಡಿ ಕಾಡೇಗೌಡ, ಸ್ವತಂತ್ರ ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾಧ್ಯಕ್ಷ ಭಾಸ್ಕರ್, ರಮೇಶ್, ದಿಲೀಪ್ ಸೇರಿದಂತೆ ಮತ್ತಿತರರು ಇದ್ದರು.

# ಸುಂದರ ಕನ್ನಡ ಭಾಷೆ ಉಳಿಸಿ ಬೆಳೆಸುವ ಹೊಣೆ ಎಲ್ಲರದು

**ಸಂ.ಕ. ಸಮಾಚಾರ, ದೇವನಹಳ್ಳಿ**

ಕನ್ನಡ ಭಾಷೆ ಪವಿತ್ರವಾದ ಭಾಷೆ, ಕರ್ನಾಟಕದಲ್ಲಿ ಕನ್ನಡವನ್ನು ಉಳಿಸಿ ಬೆಳೆಸುವ ಕೆಲಸವನ್ನು ಪ್ರತಿಯೊಬ್ಬರೂ ಮಾಡಬೇಕು. ನಾವು ಇತರ ಯಾವುದೇ ಭಾಷೆಯನ್ನು ಕಲಿತರು ನಮ್ಮ ಮಾತೃ ಭಾಷೆಗೆ ಪ್ರಥಮ ಆದ್ಯತೆ ನೀಡಬೇಕು ಎಂದು ಕರ್ನಾಟಕ ರಕ್ಷಣಾವೇದಿಕೆಯ ರಾಜ್ಯ ಉಪಾಧ್ಯಕ್ಷ ಅಂಬರೀಶ್‌ಗೌಡ ತಿಳಿಸಿದರು.

ಪಟ್ಟಣದ ರಾಣಿಕ್ರಾಸ್‌ನಲ್ಲಿ ಕರವೇ ಹಾಗೂ ಪುನೀತ್ ರಾಜ್‌ಕುಮಾರ್ ಅಭಿಮಾನಿ ಸಂಘದಿಂದ ಹಮ್ಮಿಕೊಂಡಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು.

ಪ್ರಧಾನ ಸಂಚಾಲಕ ಬಿ.ಕೆ. ನಾರಾಯಣ ಸ್ವಾಮಿ ಮಾತನಾಡಿ ಪ್ರತಿ ವರ್ಷ ಕನ್ನಡ ರಾಜ್ಯೋತ್ಸವವನ್ನು ಹಬ್ಬದ ರೀತಿಯಲ್ಲಿ ಆಚರಣೆ ಮಾಡುತ್ತಿದ್ದಾರೆ. ಕನ್ನಡಿಗರು ಕನ್ನಡ ಭಾಷೆಗೆ ಹೆಚ್ಚಿನ ಆದ್ಯತೆ ಕೊಡಬೇಕೆಂದರು.

ಕರವೇ ರಾಜ್ಯ ಮಹಿಳಾ ಘಟಕದ ಉಪಾಧ್ಯಕ್ಷೆ ಸಂಗೀತ ಶೆಟ್ಟಿ, ಜಿಲ್ಲಾ ಕಾರ್ಮಿಕ ಘಟಕದ ಅಧ್ಯಕ್ಷ ವೀರ ಶಿವಕುಮಾರ್, ಪ್ರಚಾರ ಸಮಿತಿ ಅಧ್ಯಕ್ಷ ಲೋಕೇಶ್ ಗೌಡ, ತಾಲ್ಲೂಕು ಅಧ್ಯಕ್ಷ ಬಿ.ಟಿ.ಅನಿಲ್ ಕುಮಾರ್, ಉಪಾಧ್ಯಕ್ಷ ಎಂ.ಜೆ.ಶ್ರೀನಿವಾಸ್, ಪ್ರಧಾನ ಕಾರ್ಯದರ್ಶಿ ಶಿವಕುಮಾರ್ ಆರಾಧ್ಯ, ಯುವ ಘಟಕದ ಅಧ್ಯಕ್ಷ ಗೊಕರೆ ಸತೀಶ್, ಮಾಧ್ಯಮ ಘಟಕದ ಅಧ್ಯಕ್ಷ ಮಧುಚಂದ್ರ, ತಾಲ್ಲೂಕು ಮಹಿಳಾ ಘಟಕದ ಅಧ್ಯಕ್ಷೆ ನೇತ್ರಉಪಾಧ್ಯಕ್ಷೆ ಶೈಲಜಾ, ಸದಸ್ಯರಾದ ಶಿವಕುಮಾರ್, ವೇಣುಗೋಪಾಲ್,ಉಮೇಶ್ ಸೇರಿದಂತೆ ಕನ್ನಡದ ಹಾಗೂ ಪುನೀತ್ ರಾಜ್‌ಕುಮಾರ್ ಅಭಿಮಾನಿಗಳ ಸಂಘದ ಗೌರವಾಧ್ಯಕ್ಷ ನವೀನ್, ಅಧ್ಯಕ್ಷ ಚರಣ್, ಸದಸ್ಯರಾದ ಮುರಳಿ, ವಾಸು, ಪಿಳ್ಳಪ್ಪಯ್ಯ, ಮುನಿರಾಜು, ನವೀನ್, ಪ್ರಶಾಂತ್, ಮುಂತಾದವರು ಇದ್ದರು.

# ಹೆಣ್ಣು ಭ್ರೂಣ ಹತ್ಯೆ ತಡೆಗೆ ಕಠಿಣ ಕಾನೂನು

**ಮಂಡ್ಯ :** ಹೆಣ್ಣು ಭ್ರೂಣ ಹತ್ಯೆಯು ಸಮಾಜ ಘಾತಕ ಕೆಲಸವಾಗಿದ್ದು, ಈ ರೀತಿಯ ಕೃತ್ಯಗಳಿಗೆ ಅವಕಾಶ ನೀಡಬಾರದು. ಕಠಿಣ ಕಾನೂನಿನ ಮೂಲಕ ಅಗತ್ಯ ಕ್ರಮ ತೆಗೆದುಕೊಂಡು ಈ ರೀತಿಯ ಕೃತ್ಯಗಳನ್ನು ತಡೆಯಲಾಗುವುದು ಎಂದು ರಾಜ್ಯ ಮಕ್ಕಳ ಹಕ್ಕು ರಕ್ಷಣಾ ಆಯೋಗದ ರಾಜ್ಯಾಧ್ಯಕ್ಷ ನಾಗಣ್ಣಗೌಡ ಅವರು ತಿಳಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಹೆಣ್ಣು ಭ್ರೂಣ ಹತ್ಯೆ ಸಂಬಂಧಪಟ್ಟಂತೆ ತುರ್ತು ಸಭೆ ನಡೆಸಿ ಮಾತನಾಡಿದರು. 21ನೇ ಶತಮಾನದಲ್ಲೂ ಕೂಡ ಇಂತಹ ಭ್ರೂಣ ಹತ್ಯೆ ನಡೆಯುತ್ತಿರುವುದು, ಲಿಂಗ ತಾರತಮ್ಯ ಸರಿಯಲ್ಲ. ಯಾವುದೇ ಕಾರಣಕ್ಕೂ ಇಂತಹ ಕೃತ್ಯಕ್ಕೆ ಅವಕಾಶ ನೀಡಬಾರದು ಎಂದರು.

# ಸಾಹಿತ್ಯ– ಸಂಗೀತ ಕ್ಷೇತ್ರಕ್ಕೆ ಕನಕದಾಸರ ಕೊಡುಗೆ ಅಪಾರ

**ಸಂ.ಕ. ಸಮಾಚಾರ, ವಿಜಯಪುರ**

ಕನ್ನಡ ಸಾಹಿತ್ಯ, ಸಂಗೀತ ಮತ್ತು ಸಾಂಸ್ಕೃತಿಕ ಕ್ಷೇತ್ರಕ್ಕೆ ಕನಕದಾಸರ ಕೊಡುಗೆ ಅಪಾರ ಎಂದು ಬೆಂಗಳೂರು ಗ್ರಾಮಾಂತರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಎಚ್.ಎಸ್. ರುದ್ರೇಶ ಮೂರ್ತಿ ತಿಳಿಸಿದರು.

ಪಟ್ಟಣದ ಮಾರುತಿ ನಗರದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಘಟಕದ ವತಿಯಿಂದ ಹಮ್ಮಿಕೊಂಡಿದ್ದ ಕನಕದಾಸ ಜಯಂತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ವಚನ ಸಾಹಿತ್ಯ ಮತ್ತು ದಾಸ ಸಾಹಿತ್ಯ ಪ್ರಕಾರಗಳು ಕನ್ನಡ ಸಾಹಿತ್ಯದಲ್ಲಿ ಕಂಗೊಳಿಸುತ್ತಿವೆ. ಅಂದಿನ ಕಾಲಘಟ್ಟದಲ್ಲಿನ ಸಾಮಾಜಿಕ ಸಂಘರ್ಷದ ನಡುವೆಯೂ ದಾಸ ಪರಂಪರೆಯನ್ನು ಯಶಸ್ವಿಯಾಗಿ ಮುನ್ನಡೆಸುವಲ್ಲಿ ಶ್ರಮಿಸಿದ ಕನಕದಾಸರು ಮಾನವೀಯತೆಯ ಮಹಾಮೂರ್ತಿಯಾಗಿದ್ದಾರೆ ಎಂದರು.

ಟೌನ್ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಜೆ.ಎನ್.ಶ್ರೀನಿವಾಸ್ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಜಿಲ್ಲಾ ಶರಣ ಸಾಹಿತ್ಯ ಮಾಜಿ ಅಧ್ಯಕ್ಷ ಚಂದ್ರಶೇಖರ ಹಡಪದ್, ಅಖಿಲ ಕರ್ನಾಟಕ ಮಿತ್ರ ಸಂಘದ ಅಧ್ಯಕ್ಷ ಜಿ.ಮಾ.ಸುಧಾಕರ್, ಸಾಮಾಜಿಕ ಕಾರ್ಯಕರ್ತ ವಿ.ಎನ್.ಸೂರ್ಯ ಪ್ರಕಾಶ್, ಕಸಾಪ ಕಾರ್ಯದರ್ಶಿ ಪ್ರಕಾಶ್, ಸರಸ್ವತಮ್ಮ, ಜಗದೀಶ್, ಆರ್. ಮುನಿರಾಜು, ಜೇಸೀಐ ಅಧ್ಯಕ್ಷ ಎನ್.ಸಿ.ಮುನಿ ವೆಂಕಟರಮಣ, ಸೀನಿಯರ್ ಚೇಂಬರ್ ಅಧ್ಯಕ್ಷ ಎಂ.ಶಿವಕುಮಾರ್, ಜೆ.ಆರ್.ಮುನೀರಣ್ಣ, ಲಕ್ಷ್ಮಣ್, ಕಾಂಗ್ರೆಸ್ ಮುಖಂಡ ಮಹೇಶ್, ಮತ್ತಿತರರು ಇದ್ದರು. ರಂಗನಿರ್ದೇಶಕ ಎಂ.ವಿ.ನಾಯ್ಡು, ಮಹಾತ್ಮಾಂಜನೇಯ, ನರಸಿಂಹಪ್ಪ, ನಿವೃತ್ತ ಶಿಕ್ಷಕ ಕೆ.ಎಚ್.ಚಂದ್ರಶೇಖರ್, ಕೃಷ್ಣಪ್ಪ, ನಾರಾಯಣಸ್ವಾಮಿ ಅವರಿಂದ ಕೀರ್ತನೆಗಳ ಗಾಯನ ನಡೆಯಿತು. ಎಚ್.ಎಸ್. ರುದ್ರೇಶಮೂರ್ತಿ, ಕೆ.ಮುನಿರಾಜು ಅವರನ್ನು ಸನ್ಮಾನಿಸಲಾಯಿತು.


## ಶ್ರೀರಾಮ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್

SHRIRAM HOUSING FINANCE

ನೋಂದಾಯಿತ ಕಚೇರಿ : ಕಚೇರಿ ನಂ.123, ಅಂಗಪ್ಪ ನಾಯ್ಕನ್ ಬೀದಿ, ಚೆನ್ನೈ – 600001.
ಪ್ರಧಾನ ಕಚೇರಿ : ಲೆವೆಲ್-3, ಪೆಂಕಾರ್ಪ್ ಟವರ್ಸ್, ಈಸ್ಟ್ ವಿಂಗ್ ನಂ-2 ಬ್ಲಾಕ್, ಬಾಂದ್ರಾ, ಕುರ್ಲಾ ಕಾಂಪ್ಲೆಕ್ಸ್, ಬಾಂದ್ರಾ (ಪೂರ್ವ), ಮುಂಬೈ – 400 051,
ವೆಬ್‌ಸೈಟ್ : www.shriramhousing.in

### ಸ್ವಾಧೀನ ಪ್ರಕಟಣೆ

ಆದಾಗ್ಯೂ, ಈ ಕೆಳಸಹಿದಾರರು 2002ರ ಆರ್ಥಿಕ ಸ್ವತ್ತುಗಳ ಭದ್ರತೆ ಮತ್ತು ಜುನರ್‌ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆಯಡಿ (ಮೇಲಿನ ಕಾಯ್ದೆ) ಇರುವ ಅವಕಾಶಗಳಡಿ ಶ್ರೀರಾಮ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ (ಎಸ್‌ಎಚ್‌ಎಫ್‌ಎಲ್)ನ ಅಧಿಕೃತ ಅಧಿಕಾರಿಯಾಗಿರುತ್ತಾರೆ ಹಾಗೂ 2002 ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ (ಮೇಲಿನ ನಿಯಮಗಳು) ಅಧಿನಿಯಮ 3 ರಲ್ಲಿ ಓದಿಕೊಂಡಂತೆ ಮೇಲಿನ ಕಾಯ್ದೆಯ ಸೆಕ್ಷನ್ 13(12) ರಡಿ ಅವರಿಗೆ ಪ್ರದತ್ತ ಮಾಡಿರುವ ಅಧಿಕಾರವನ್ನು ಚಲಾಯಿಸಿ ಸಾಲಗಾರರಿಗೆ ತಗಾದೆ ನೋಟಿಸನ್ನು ಜಾರಿಗೊಳಿಸಿ ಈ ಕೆಳಗಿನ ಕೋಷ್ಟಕದಲ್ಲಿ ವಿವರಿಸಿರುವಂತೆ ತಗಾದೆ ನೋಟಿಸಿನಲ್ಲಿ ವಿವರಿಸಿರುವ ಮೊತ್ತವನ್ನು ಮರು–ಪಾವತಿಸಲು ಸೂಚಿಸಿದ್ದಾರೆ.

ಸಾಲಗಾರರು ಸದರಿ ಮೊತ್ತವನ್ನು ಮರು–ಪಾವತಿಸಲು ವಿಫಲರಾದ ಕಾರಣ, ಈ ಮೂಲಕ ಸಾಲಗಾರರಿಗೆ ಮತ್ತು ಸಾಮಾನ್ಯ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಈ ಕೆಳಸಹಿದಾರರಾದ ಎಸ್‌ಎಚ್‌ಎಫ್‌ಎಲ್ ನ ಅಧಿಕೃತ ಅಧಿಕಾರಿಯವರು ಕಾಯ್ದೆಯ ಸೆಕ್ಷನ್ 13 (4) ರಡಿ ಮೇಲಿನ ನಿಯಮಗಳ ಅಧಿನಿಯಮ 8 ರಲ್ಲಿ ಓದಿಕೊಂಡಂತೆ ಅವನಿಗೆ/ಅವಳಿಗೆ ಪ್ರದತ್ತ ಮಾಡಿರುವ ಅಧಿಕಾರವನ್ನು ಉಪಯೋಗಿಸಿಕೊಂಡು ಈ ಕೆಳಗೆ ವಿವರಿಸಲಾದ ಅಡಮಾನ ಮಾಡಲಾದ ಸ್ವತ್ತುಗಳನ್ನು **ದಿನಾಂಕ 28ನೇ ನವೆಂಬರ್ 2023 ರಂದು ಸಾಂಕೇತಿಕವಾಗಿ ಸ್ವಾಧೀನಪಡಿಸಿಕೊಂಡಿದ್ದಾರೆ.**

| ಸಾಲಗಾರರ ಹೆಸರು ಮತ್ತು ವಿಳಾಸ | ತಗಾದೆ ನೋಟಿಸ್ ಪ್ರಕಾರ ಇರುವ ಬಾಕಿ ಮೊತ್ತ |
|---|---|
| 1. ಶ್ರೀ ಅಬ್ದುಲ್ ಕರೀಂ ತಂದೆ ಮೊಹಮ್ಮದ್ ಹಜೀಬುಲ್ಲಾ, ನಂ. 38/2-1, ಸುಲ್ತಾಂಜ ಗುಂಟಾ ರಸ್ತೆ, ಬಂಬೂ ಬಜಾರ್ ಹತ್ತಿರ, ಮದೀನಾ ಮಸೀದಿ ಎದುರು, ಶಿವಾಜಿನಗರ, ಬೆಂಗಳೂರು - 560 051 ಹಾಗೂ : ಅಲ್ ಕರೀಮ್ ಇಂಟರ್‌ನ್ಯಾಷನಲ್, ನಂ. 60, ಆರ್.ಕೆ. ಕೊಹಿನೂರ್, ಅಂಗಡಿ ಸಂಖ್ಯೆ. 417, ಜಿ ಬ್ಲಾಕ್, 5ನೇ ಮಹಡಿ, ಲಾಕ್‌ಬಮ್ ರಸ್ತೆ, ಎಕೆಪಿ ಕನ್ವೆನ್ಷನ್ ಹಾಲ್ ಹತ್ತಿರ, ಶಿವಾಜಿನಗರ, ಬೆಂಗಳೂರು - 560 051. 2. ಶ್ರೀ ಮೊಹಮ್ಮದ್ ಹಜೀಬುಲ್ಲಾ ತಂದೆ ಅಬ್ದುಲ್ ಕರೀಂ, ನಂ. 38/2-1, ಸುಲ್ತಾಂಜ ಗುಂಟಾ ರಸ್ತೆ, ಬಂಬೂ ಬಜಾರ್ ಹತ್ತಿರ, ಮದೀನಾ ಮಸೀದಿ ಎದುರು, ಶಿವಾಜಿನಗರ ಬೆಂಗಳೂರು - 560 051. 3. ಶ್ರೀಮತಿ ನಿಖತ್ ಫಾತಿಮಾ ಗಂಡ ಮೊಹಮ್ಮದ್ ಹಜೀಬ್ ಉಲ್ಲಾ, ನಂ. 38/2-1, ಸುಲ್ತಾಂಜ ಗುಂಟಾ ರಸ್ತೆ, ಬಂಬೂ ಬಜಾರ್ ಹತ್ತಿರ, ಮದೀನಾ ಮಸೀದಿ ಎದುರು, ಶಿವಾ